ದೇವಸ್ಥಾನವಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ, ಈ ದೇವಸ್ಥಾನದ ಕಲಾಕೃತಿಯು ಬೇಲೂರು, ಹಳೇಬೇಡುವನಲ್ಲಿರುವಂತೆ ಇರುವುದರಿಂದ ಇಲ್ಲಿಯವರೆವಿಗೂ ಪ್ರವಾಸಿ ಕೇಂದ್ರವನ್ನಾಗಿ ಮಾಡಿರಲು ಕಾರಣಗಳೇನು?

ಇ) ಈ ದೇವಸ್ಥಾನಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಲಾದ ಹಣವೆಷ್ಟು? (ವರ್ಷವಾರು ವಿವರ ನೀಡುವುದು).

ಈ)ಸರ್ಕಾರದ 200 ಪ್ರವಾಸಿ ಕೇಂದ್ರದ ಆಯ್ಕೆಯ ಪಟ್ಟಿಯಲ್ಲಿ ಈ ಸ್ಥಳವನ್ನು ಸೇರಿಸಲಾಗಿದೆಯೇ? ಇಲ್ಲದಿದ್ದಲ್ಲಿ, ಸೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಪರಿಕಲ್.ಎಂ.ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು) :-

ಅ) ಹೌದು.

ಆ)ಬಸರಾಳುವನ್ನು ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಸಿ' ಗುಂಪಿನಲ್ಲಿ ಸೇರಿಸಲಾಗಿದೆ. ಈಗುಂಪಿನಡಿಯಲ್ಲಿ ಗುರುತಿಸುವ ಸ್ಥಳಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ರಿಯಾಯಿತಿ ನೀಡಲಾಗುವುದು. ಇಲ್ಲಿಯವರೆಗೂ ಈ ಸೌಲಭ್ಯ ಪಡೆಯಲು ಯಾರೊಬ್ಬರೂ ಬಸರಾಳುವಿನಲ್ಲಿ ಮುಂದೆ ಬಂದಿಲ್ಲ.

ಇ) ಪ್ರವಾಸೋದ್ಯಮ ಇಲಾಖೆಯಿಂದ ದೇವಸ್ಥಾನಕ್ಕೆ ಯಾವ ರೀತಿಯ ಖರ್ಚನ್ನು ಮಾಡಿರುವುದಿಲ್ಲ. ಭಾರತ ಸರ್ಕಾರದ ಪ್ರಾಚ್ಯವಸ್ತು ಸಂಶೋಧನಾಲಯವು ಇದನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ.

ಈ) ಸೇರಿಸಲಾಗಿದೆ.

ರಾಜ್ಯದಲ್ಲಿ ಏಕಲವ್ಯ ಪ್ರಶಸ್ತಿ

891(1471) ಶ್ರೀ ಹೆಚ್.ಎಂ.ರೇವಣ್ಣ(ಮಾಗಡಿ) :- ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಏಕಲವ್ಯ ಪ್ರಶಸ್ತಿಯನ್ನು ಕೊಡುವುದನ್ನು ಎಂದಿನಿಂದ ಜಾರಿಗೆ ತರಲಾಯಿತು;

ಆ)ರಾಜ್ಯದಲ್ಲಿ ಎಷ್ಟು ಜನರಿಗೆ ಏಕಲವ್ಯ ಪ್ರಶಸ್ತಿ ನೀಡಲಾಗಿದೆ; ಹಾಗೂ ಇದರ ಮೊತ್ತವೆಷ್ಟು;

ಇ)ಈ ಪ್ರಶಸ್ತಿಗೆ ಆಯ್ಕೆ ಮಾಡುವಾಗ ಯಾವ ಆಧಾರವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು?

ಶ್ರೀ ಹೆಚ್.ವಿಶ್ವನಾಥ್(ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಜನಸೇವ ಮತ್ತು ಕ್ರೀಡಾ ರಾಜ್ಯ ಸಚಿವರು) :-

ಅ)1992ನೇ ಸಾಲಿನಿಂದ

ಆ)1992ನೇ ಸಾಲಿನ ಏಕಲವ್ಯ ಪ್ರಶಸ್ತಿಯನ್ನು 1993ನೇ ಸಾಲಿನಲ್ಲಿ ನೀಡಲಾಗುವುದು.

ಇ)ಆಯ್ಕೆ ಮಾಡುವಾಗ ಯಾವ ಆಧಾರವನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯನ್ನು ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ.

ಅನುಬಂಧ - 1

ಸರ್ಕಾರಿ ಆದೇಶ ವಾಪ್ರಯು 123.ಇಪಿಇ.92 ದಿನಾಂಕ: 7.11.1992ರಲ್ಲಿ ಮಂಜೂರಾಗಿರುವ ಏಕಲವ್ಯ ಪ್ರಶಸ್ತಿ ಯೋಜನೆಯ ಮುಖ್ಯ ಅಂಶಗಳು.

1) ಏಕಲವ್ಯ ಪ್ರಶಸ್ತಿಯನ್ನು ಸಂಬಂಧಿಸಿದ ಕ್ಯಾಲೆಂಡರ ವರ್ಷಕ್ಕೆ ನೀಡಲಾಗುವುದು.

2) ಗುರ್ತಿಸಲಾಗಿರುವ 32 ಕ್ರೀಡೆಗಳಲ್ಲಿ ಈ ಪ್ರಶಸ್ತಿಯನ್ನು ಒಬ್ಬ ಪುರುಷ ಹಾಗೂ ಒಬ್ಬ ಮಹಿಳೆಗೆ ಅರ್ಹತೆಯುಳ್ಳ ಕ್ರೀಡೆಗಳು ದೊರಕಿದ ಪಕ್ಷದಲ್ಲಿ ನೀಡಲಾಗುದುವುದು.

3) ಈ ಪ್ರಶಸ್ತಿಯು ಒಂದು ಕಂಚಿನ ಪ್ರತಿಮೆ, ಪ್ರಶಸ್ತಿ ಪತ್ರ, ಒಂದು ಉಲ್ಲನ್ ಬ್ಲೇಸರ್ ಹಾಗೂ ರೇಷ್ಮೆ ಟೈ:ಸ್ಕಾರ್ ಹಾಗೂ ನಗದು ರೂ.10,000ಗಳು ಒಳಗೊಂಡಿರುತ್ತದೆ.

4) ನಾಮಕರಣ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ರಾಜ್ಯ ಕ್ರೀಡಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳಿಂದ ಪಡೆಯಲಾಗುವುದು. ಕರ್ನಾಟಕ ಸರ್ಕಾರ ಮೇಲ್ಕಂಡ ಕ್ರೀಡಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳಿಂದ ಪಡೆದ ಹೆಸರುಗಳಲ್ಲದೆ ಇತರೆ ಯಾವುದೇ ಕ್ರೀಡಾ ಪಟುವು ಸದರಿ ವರ್ಷದಲ್ಲಿ ಪ್ರಶಸ್ತಿಗೆ ಕಂಡು ಬಂದಲ್ಲಿ ಅರ್ಹತೆ ಮತ್ತು ಪ್ರತಿಭೆಯನ್ನು ಪರಿಗಣಿಸಿ ಸರ್ಕಾರವು ಈ ಪ್ರಶಸ್ತಿಯನ್ನು ನೀಡುವುದು.

5) ಈ ಪ್ರಶಸ್ತಿಯನ್ನು 5 ವರ್ಷಕ್ಕೂ ಕಡಿಮೆ ಇಲ್ಲದಂತೆ ಕರ್ನಾಟಕದ ರಾಜ್ಯದಲ್ಲಿ ನೆಲಸಿದ್ದು ಮತ್ತು ಕಳೆದ 5 ವರ್ಷಗಳಿಂದ ಕರ್ನಾಟಕವನ್ನು ಪ್ರತಿನಿಧಿಸಿರುವ ಕ್ರೀಡಾ ಪಟುಗಳಿಗೆ ನೀಡಲಾಗುವುದು.

6) ಏಕಲವ್ಯ ಪ್ರಶಸ್ತಿಯನ್ನು ಮುಕ್ತ ಪಂದ್ಯಾವಳಿಯಲ್ಲಿ ಭಾಗವಹಿಸಿ ಉತ್ಕೃಷ್ಟ ಸ್ಥಾನವನ್ನು ಪಡೆದಿರುವ ಕ್ರೀಡಾ ಪಟುಗಳಿಗೆ ನೀಡಲಾಗುವುದು. ಈ ಮುಕ್ತ ಪಂದ್ಯಾವಳಿಯು ಅಂಗವಿಕಲತೆಯನ್ನೊಳಗೊಂಡಂತೆ ಯಾವುದೇ ಕ್ರೀಡಾ ಪ್ರವರ್ಗ ಪಟುವಿನ ವೃತ್ತಿ ವಯೋಮಿತಿ ಇವುಗಳ ನಿರ್ಬಂದವಿಲ್ಲದೇ ಇರುವಂತಹ ಮುಕ್ತ ಪಂದ್ಯಾವಳಿಯಾಗಿರಬೇಕು.

7) ಈ ಪ್ರಶಸ್ತಿಯನ್ನು ನೀಡಲು ಕ್ರೀಡಾ ಪಟುವಿನ ಅರ್ಹತೆಯನ್ನು ನಿರ್ದರಿಸುವಾಗ್ಗೆ ಸದರಿ ಪ್ರಶಸ್ತಿ ನೀಡುವ ವರ್ಷವೂ ಸೇರಿದಂತೆ ಕಳೆದ 3 ವರ್ಷಗಳ ಕ್ರೀಡ ಸಾಧನೆಯನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸಲಾಗುವುದು.

8) ರಾಜ್ಯ ಕ್ರೀಡಾ ಸಂಘಗಳು ಮತ್ತು ವಿಶ್ವವಿದ್ಯಾನಿಲಯಗಳು ಪ್ರತಿ ಕ್ರೀಡಾ ವಿಭಾಗಗಳಲ್ಲಿ ಎರಡು ಕ್ರೀಡಾ ಪಟುಗಳ ಹೆಸರುಗಳನ್ನು ಮೀರದಂತೆ ಹೆಸರುಗಳನ್ನು ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರಿಗೆ ಶಿಫಾರಸ್ಸು ಮಾಡಬಹುದಾಗಿದೆ.

ಅಂದರೆ ಪ್ರತಿ ಕ್ರೀಡಾ ವಿಭಾಗದಲ್ಲಿ ಇಬ್ಬರು ಪುರುಷ ಕ್ರೀಡಾ ಪಟುಗಳ ಮತ್ತು ಇಬ್ಬರು ಮಹಿಳಾ ಕ್ರೀಡಾ ಪಟುಗಳ ಹೆಸರನ್ನು ಕ್ರೀಡಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳು ನಾಮಕರಣ ಮಾಡುವರು.

9) ಕ್ರೀಡಾ ಪಟುವಿಗೆ ಎರಡನೇ ಬಾರಿ ಈ ಪ್ರಶಸ್ತಿಯನ್ನು ನಿಡಲಾಗುವುದಿಲ್ಲ.

10) ಈ ಪ್ರಶಸ್ತಿ ನೀಡುವುದರ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರದ ತೀರ್ಮಾನವೇ ಅಂತಿಮ ಮತ್ತು ನಿರ್ಣಯದಾಯಕವಾಗಿರುತ್ತದೆ.

11) ಈ ಪ್ರಶಸ್ತಿ ಪಡೆದ ಕ್ರೀಡಾ ಪಟು ನಕಲಿ ಪ್ರಮಾಣ ಪತ್ರ ಅಥವಾ ಸುಳ್ಳು ಮಾಹಿತಿನೀಡಿದ್ದು ಕಂಡು ಬಂದಲ್ಲಿ ಅಂತಹ ಕ್ರೀಡಾ ಪಡುವಿಗೆ ನೀಡಿದ್ದ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ರದ್ದುಗೊಳಿಸುವುದು.

ಅನುಬಂಧ - 2

ಏಕಲವ್ಯ ಪ್ರಶಸ್ತಿಗೆ ಪರಿಗಣಿಸಲಾದ ಕ್ರೀಡೆಗಳ ಪಟ್ಟಿ

1. ಚೆಸ್
2. ಫುಟ್‌ಬಾಲ್
3. ಜಿಮ್ನಾಸ್ಟಿಕ್
4. ಹಾಕಿ
5. ಹ್ಯಾಂಡ್‌ಬಾಲ್
6. ಖೋ ಖೋ
7. ಕಬಡ್ಡಿ
8. ಟೆನ್ನಿಸ್
9. ಪವರ್ ಲಿಫ್ಟಿಂಗ್
10. ಸ್ವಿಮಿಂಗ್
11. ಟೇಬಲ್ ಟೆನ್ನಿಸ್
12. ವಾಲಿಬಾಲ್
13. ರೆಸ್ಲಿಂಗ್
14. ವೈಟ್ ಲಿಫ್ಟಿಂಗ್
15. ಅಥ್ಲೆಟಿಕ್ಸ್
16. ಆರ್ಚ್‌ರಿ
17. ಬಾಡಿಬಿಲ್ಡಿಂಗ್
18. ಬ್ಯಾಡ್‌ಮಿಂಟನ್
19. ಜ್ಯೂಡೋ
20. ರೈಫಲ್
21. ಸ್ಕೇಟಿಂಗ್
22. ಸಾಫ್ಟ್‌ಬಾಲ್
23. ಬೇಸ್‌ಬಾಲ್

24. ರೋಯಿಂಗ್
25. ಬಿಲಿಯರ್ಡ್ಸ್
26. ಬಾಲ್ ಬ್ಯಾಡ್‌ಮಿಂಟನ್
27. ಬ್ಯಾಸ್ಕೆಟ್‌ಬಾಲ್
28. ಬಾಕ್ಸಿಂಗ್
29. ಸೈಕ್ಲಿಂಗ್
30. ಕ್ರಿಕೆಟ್
31. ಮಹಿಳಾ ಹಾಕಿ
32. ಮಹಿಳಾ ಕ್ರಿಕೆಟ್

ಹೊರ ರಾಜ್ಯದ ಏಕ ಅಂಕಿ ಲಾಟರಿ

892(1739) ಶ್ರೀ ಹೆಚ್.ಎಂ.ರೇವಣ್ಣ(ಮಾಗಡಿ) :- ಮಾನ್ಯ ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊರ ರಾಜ್ಯದ ಏಕ ಅಂಕಿ ಲಾಟರಿ ಟಿಕೇಟ್ ರಾಜ್ಯದಲ್ಲಿ ಮಾರಾಟವಾಗುತ್ತಿದೆಯೇ;

ಆ) ಇದನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ;

ಇ) ಹಾಗಿದ್ದಲ್ಲಿ, ಯಾವಾಗ ರದ್ದು ಪಡಿಸಲಾಗುವುದು?

ಶ್ರೀ ರಾಮಲಿಂಗಾರೆಡ್ಡಿ (ಹಣಕಾಸಿನ ರಾಜ್ಯ ಸಚಿವರು) :-

ಅ) ಹೌದು

ಆ) ಇತರೆ ರಾಜ್ಯಗಳ ಒಂದಂಕಿಯ ಲಾಟರಿ ಮಾರಾಟವನ್ನು ರದ್ದುಪಡಿಸಲು ಸರ್ಕಾರ ಇಚ್ಚಿಸುತ್ತಾದರೂ ಕಾನೂನು ಅಡಚಣೆಗಳಿರುವುದರಿಂದ ಇದುವರೆವಿಗೂ ಇದನ್ನು ರದ್ದು ಮಾಡಲು ಸಾಧ್ಯವಾಗಿರುವುದಿಲ್ಲ.

ಇ) (ಆ)ನಲ್ಲಿ ಉತ್ತರಿಸುವುದರಿಂದ, ಉದ್ಭವಿಸುವುದಿಲ್ಲ.

ಕನಕಪುರ ತಾಲ್ಲೂಕಿನಲ್ಲಿ ಟೌನ್ ಆರಕ್ಷಕ ಠಾಣೆ.

894(1475) ಶ್ರೀ ಬಿ.ಕೆ. ಶಿವಕುಮಾರ(ಸಾತನೂರು) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕನಕಪುರ ತಾಲ್ಲೂಕಿನಲ್ಲಿ ಟೌನ್ ಆರಕ್ಷಕ ಠಾಣೆ ಮತ್ತು ದೊಡ್ಡ ಹಾಲಹಳ್ಳಿಯಲ್ಲಿ ಔಟ್‌ಪೋಸ್ಟ್ ಆರಕ್ಷಕ ಠಾಣೆ ಪ್ರಾರಂಭಿಸುವ ಆಲೋಚನೆಯು ಸರ್ಕಾರದ ಗಮನದಲ್ಲಿದೆಯೇ?

2) ಕನಕಪುರ ತಾಲ್ಲೂಕಿನಲ್ಲಿ ಎಷ್ಟುಆರಕ್ಷಕ ಠಾಣೆಗಳಿವೆ? ಅಲ್ಲಿ ಈಗಿರುವ ಆರಕ್ಷಕ ಸಿಬ್ಬಂದಿಯ ಸಂಖ್ಯೆ ಎಷ್ಟು? ಇನ್ನೂ ಹೆಚ್ಚು ಸಿಬ್ಬಂದಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

3) ಕನಕಪುರ ಟೌನಿನಲ್ಲಿ ಆರಕ್ಷಕ ಠಾಣೆ ಕಛೇರಿಯ ಕಟ್ಟಡ ಕಟ್ಟಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ? ಹಾಗಿದ್ದಲ್ಲಿ ಇದು ಯಾವ ಹಂತದಲ್ಲಿದೆ.